ಶಾರದಮ್ಮಳಿಗೆ 'ನಾಳೀಕೆ ಪ್ರೆಸಿಡೆಂಟ್ ಬರ್‍ತಿರೋದು. ಇಂತಾ ಟೇಮುಕ ಈ ಹಾಳು ಮಳೆ ಯಿಡ್ಕೋಬೇಕ' ಎಂಬ ನಾಗರಾಜನ ಮಾತುಗಳು ಆ ಮಳೆಯಲ್ಲಿಯೂ ಸ್ಪಷ್ಟವಾಗಿ ಕೇಳಿಸುವಂತಿದ್ದವು. ತನ್ನ ಹರಿದ ಗೋಡೆಗೆ ಒರಗಿಕೊಂಡ ಅವಳು ನಗುತ್ತಲಿದ್ದಳು. ಮತ್ತೆ 'ನನ್ ಮನಿ ಮುಂದ್ಕೆ ಬರುದೆ ಎಲ್ಲೋಗ್ತಿ' ಎಂದುಕೊಳ್ಳುತ್ತಾ ಒಳನಡೆದಳು.

ಅಂದು ರಾತ್ರಿಯೆಲ್ಲ ಮಳೆ ಸರುವುಗಳಲ್ಲಿ ಜಡಿಯುತ್ತಲೆ ಇತ್ತು. ಬೆಳಗಾಗುತ್ತಿದ್ದಂತೆ ಊರು ಕುಗ್ಗಿಹೋಗಿತ್ತು. ಮಳೆ ನಿಂತಿರಲಿಲ್ಲ. ಜೊತೆಗೆ ಧಾರಾಕಾರ ಮಳೆಯ ಕಾರಣ ರಾಷ್ಟ್ರಪತಿಗಳ ಕಾರ್ಯಕ್ರಮವನ್ನು ರದ್ದುಗೊಳಿಸಲಾಗಿರುವ ವಿಷಯ ಆಗಲೇ ಊರ ಪ್ರತಿ ಮನೆಯನ್ನೂ ತಲುಪಿತ್ತು. ಹಾಗಾಗಿ ಎಲ್ಲಾ ಮನೆಗಳೂ ಮುದುಡಿ ಕುಳಿತಿದ್ದವು. ಒಂದು ರೀತಿಯ ಖಿನ್ನತೆ ಆವರಿಸಿರುವ ಹಾಗಿತ್ತು. ಜೀವಮಾನದಲ್ಲಿ ಒಮ್ಮೆ ಸಂಭವಿಸುವುದೂ ಅಸಾಧ್ಯ ಎನ್ನುವಂತ ಘಟನೆಗೆ ಎದುರುಗೊಳ್ಳಲು ಪುಳಕಗೊಂಡಿದ್ದ ಆ ಊರು ಈಗ ಅಂತಹ ಸಂಭ್ರಮದಿಂದ ವಂಚಿತಗೊಂಡಿರುವುದಕ್ಕೆ ಶೋಕವನ್ನು ಹೊದ್ದು ಕುಳಿತಿತ್ತು.

ಹತ್ತು ಗಂಟೆಯ ಸುಮಾರಿಗೆ ಮಳೆ ಬಿಡುವು ಕೊಟ್ಟಿತು. ಕೆರೆ ಕೋಡಿ ಬಿದ್ದಿದೆಯೆಂಬ ಸುದ್ದಿ ಮತ್ತೆ ಊರು ತುಸು ಸಂಭ್ರಮಗೊಳ್ಳುವುದಕ್ಕೆ ಕಾರಣವಾಗಿತ್ತು. ಎಲ್ಲರೂ ಪುಳಕದಲ್ಲಿ ಕೆರೆಯ ಬಳಿಗೆ ನಡೆಯತೊಡಗಿದರು. ಶಾರದಮ್ಮಳೂ ನಡೆಯತೊಡಗಿದಳು. ಅವಳ ಮುಖದಲ್ಲಿ ನಗು ಕಾಣೆಯಾಗಿ ಮತ್ತೆ ಕುಗ್ಗಿಹೋಗಿದ್ದಳು. ಮಳೆ ತನಗೆ ಎಲ್ಲ ರೀತಿಯಿಂದಲೂ ತೊಂದರೆ ಕೊಡುತ್ತಲಿದೆ ಎಂಬ ವಿಷಯ ಅವಳನ್ನು ಹಿಂಡತೊಡಗಿತು. ಇರುವ ಒಂದು ಅವಕಾಶವೂ ಈ ಮಳೆ ದೆಸೆಯಿಂದ ತಪ್ಪಿಹೋಯಿತು ಎಂದು ಶಪಿಸತೊಡಗಿದಳು. ಕೆರೆ ಕೋಡಿ ಬಿದ್ದಿರುವ ಸದ್ದು ಅಷ್ಟು ದೂರಕ್ಕೆ ಭರ್ಜರಿಯಾಗಿ ಕೇಳುತ್ತಲಿತ್ತು. ಅವಳ ಕಿವಿಗಳು ಅರಳತೊಡಗಿದವು. ಎಷ್ಟು ವರ್ಷಗಳಾಗಿ ಹೋದವು, ಇಂಥಾ ಸದ್ದನ್ನು ಕೇಳಿಸಿಕೊಂಡು ಎಂದು ಹಿಗ್ಗತೊಡಗಿದಳು. ಅವಳ ಸೋರುತ್ತಿರುವ ಮನೆ, ಹರಿದು ಚಿಂದಿಯಾಗಿರುವ ಗೋಡೆಗಳು, ಜೈಲು ಸೇರಿರುವ ಮಗಳು, ತಾನು ಮನೆ ಕಟ್ಟಿಕೊಳ್ಳಲು ಹಣ ಮಂಜೂರು ಮಾಡದ ಊರ ಪಂಚಾಯತಿ, ರಾಷ್ಟ್ರಪತಿಗಳಿಗೆ ತನ್ನ ಮನೆಯನ್ನು ತೋರಿಸಲು ಇದ್ದ ಅವಕಾಶವನ್ನು ಕಸಿದುಕೊಂಡ ಮಳೆ... ಎಲ್ಲವೂ ಅವಳಿಂದ ದೂರಾಗತೊಡಗಿದವು. ಕೆರೆ ಕೋಡಿ ಬಿದ್ದಿರುವ ಸದ್ದೊಂದೇ ಅವಳನ್ನು ತುಂಬಿಕೊಂಡು ಹಕ್ಕಿಯಂತೆ ಹಾರಾಡಲು ಶುರುಮಾಡಿದಳು. ಹಾಗೆ ಹಾರುತ್ತಲೇ ಕೋಡಿಯ ಬಳಿಗೆ ನಡೆದಳು. ಆಗಲೇ ಸಾಕಷ್ಟು ಜನರು ಅಲ್ಲಿ ಸೇರಿದ್ದರು. ಅವಳು ಕೋಡಿಯ ಮೇಲೆ ನಡೆಯತೊಡಗಿದಳು.

ಪಾದಗಳು ಜೀವಮಾನದ ಸಂಭ್ರಮವೋ ಎಂಬಂತೆ ಅರಳತೊಡಗಿದವು. ಯಾರೋ ಒಬ್ಬರು 'ಮರುವು, ಕಟ್ಟೆ ವೀಕಾಗಿದೆ... ಅದರ ಮೇಕೆ ವೋಗ್ಬೇಡಿ' ಎಂದು ಕೂಗಿದರು. ಶಾರದಮ್ಮ ನಡೆಯುತ್ತಲೇ ಇದ್ದಳು. ಹಾಗೆ ಉದ್ದಕ್ಕೂ ನಡೆದು ಕೋಡಿಯ ಮತ್ತೊಂದು ಬದಿಗಿದ್ದ ಮೆಟ್ಟಿಲುಗಳನ್ನು ಹತ್ತಿ ಏರಿಯಾ ಮೇಲೆ ನಡೆದಳು. ಒಮ್ಮೆ ಕೆರೆಯ ಪಾತ್ರ, ಕೋಡಿ ಎಲ್ಲವನ್ನೂ ಮೈಮರೆತು ನೋಡತೊಡಗಿದಳು. ಆ ಭೋರ್ಗರೆವ ಸದ್ದು, ಕೆರೆಯ ತುಂಬಿದ ಎದೆ, ಹಾಲಿನಂತೆ ನೊರೆಯೆಬ್ಬಿಸುತ್ತಿರುವ ನೀರು... ಅವಳ ರೋಮಗಳು ನಿಮಿರತೊಡಗಿದವು. ಕೆಳಗೆ ಮತ್ತೊಂದು ಬದಿಯಿಂದ 'ಕಟ್ಟೆ ವೀಕಾಗಿದೆ ಬಂದ್ಬಿಡು ಶಾರದಮ್ಮ...' ಎನ್ನುವ ಕೂಗು ಅವಳಿಗೆ ಕೇಳಿಸುವಂತಿರಲಿಲ್ಲ. ಮತ್ತೆ ಮಳೆ ಹನಿಯತೊಡಗಿತು. ಅವಳು ಅಲ್ಲೇ ಕಟ್ಟೆಯ ಮೇಲೆ ಕುಳಿತಳು. ಬಹಳ ಹೊತ್ತು ಕುಳಿತೇ ಇದ್ದಳು. ಮಳೆ ಬಿರುಸಾಗತೊಡಗಿತು. ಅವಳೊಳಗೆ ಮತ್ತೆ ಮನೆ, ಮಗಳು, ಊರು, ಪಂಚಾಯತಿ, ರಾಷ್ಟ್ರಪತಿ... ಎಲ್ಲವೂ ಸರತಿ ಅಲೆಗಳಾಗಿ ಕೋಡಿ ಬಿದ್ದಂತೆ ಉಕ್ಕತೊಡಗಿದವು.

ಆಕಾಶದ ಕಡೆ ಮುಖ ಮಾಡಿ ಬಿರುಸು ಮಳೆಗೆ ಕಣ್ಣು ಮುಚ್ಚಿಕೊಂಡು 'ವುಯ್ಯೋ ವುಯ್ಯೋ ಮಳೆರಾಯ, ಕಟ್ಟೆ ವಡೆದು ಚೂರಾಗ್ಲಿ... ವುಯ್ಯೋ ವುಯ್ಯೋ ಮಳೆರಾಯ ಊರಿಗೆ ನುಗ್ಗಿ ಮುಳುಗೋಗ್ಲಿ... ವುಯ್ಯೋ ವುಯ್ಯೋ ಮಳೆರಾಯ ಲೋಕುದ ಕೊಳೆಯೆಲ್ಲ ಕೊಚ್ಕೋಗ್ಲಿ...' ಎಂದು ಜೋರಾಗಿ ಹಾಡತೊಡಗಿದಳು.

ಅವಳ ಹಾಡು, ಮಳೆ, ಕೆರೆಯ ಸದ್ದು ಎಲ್ಲವೂ ಏಕವಾದಂತೆ... ಅಲ್ಲಿ... ●